ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. **1241/2017**

| | | | |
|---|---|---|---|
| ಸಾಕ್ಷಿದಾರರು ಹೆಸರು | : | ನಂಜುಂಡಸ್ವಾಮಿ | ದಿನಾಂಕಃ **02.08.2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : | ಸಿದ್ದನಾಯಕ | |
| ವಯಸ್ಸು | : | **29** ವರ್ಷ | |
| ಉದ್ಯೋಗ | : | ಖಾಸಗಿ ಕೆಲಸ | **CW-1** |
| ವಾಸಸ್ಥಳ | : | ಬಿಸಲವಾಡಿ ಗ್ರಾಮ. | **PW-2** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಚಾಸಾ2 ನನ್ನ ತಾಯಿ. ಚಾಸಾ3 ನನ್ನ ತಮ್ಮ. ಚಾಸಾ 4 ರಿಂದ 6 ರವರ ಪರಿಚಯ ಇದೆ. ಆರೋಪಿಗಳು ನನ್ನ ಸಂಬಂಧಿಕರು. ದಿನಾಂಕಃ 07.03.2017 ರಂದು ಬಿಸಲವಾಡಿ ಗ್ರಾಮದ ಬೀರಾಜಿ ಕೆರೆ ಹತ್ತಿರ ಇರುವ ನಮ್ಮ ತಾತನವರ ಜಮೀನಿನಲ್ಲಿ ನಾನು , ಚಾಸಾ2 ಮತ್ತು 3 ರವರು ಕೆಲಸ ಮಾಡುತ್ತಿದ್ದಾಗ, ಬೆಳಿಗ್ಗೆ 11.45 ರ ಸಮಯದಲ್ಲಿ ನಮ್ಮ ಜಮೀನಿಗೆ ದನಕರುಗಳು ನುಗ್ಗಬಾರದು ಎಂದು ನಾವು ಹಾಕಿದ್ದ ತಂತಿ ಬೇಲಿಯ ಗಳಗಳನ್ನು ಆರೋಪಿಗಳು ಮುರಿದುಹಾಕುತ್ತಿದ್ದು, ಆಗ ಚಾಸಾ2 ರವರು ಈ ಬಗ್ಗೆ ಪ್ರಶ್ನಿಸಿದಾಗ ಆರೋಪಿಗಳು ಅವರನ್ನು ಅವಾಚ್ಯ ಶಬ್ದಗಳಿಂದ ಬೈದು, ಆಗ 1 ನೇ ಆರೋಪಿ ಚಾಸಾ2 ರವರನ್ನು ಕೆಳಕ್ಕೆ ತಳ್ಳಿದ್ದು, ಚಾಸಾ2 ರವರು ಕೆಳಕ್ಕೆ ಬಿದ್ದಾಗ, 2 ನೇ ಆರೋಪಿ ಅಲ್ಲೇ ಇದ್ದ ಗಳುವನ್ನು ತೆಗೆದುಕೊಂಡು ಚಾಸಾ2 ರವರ ಮೈಕೈಗೆ ಮತ್ತು ಬಲತೋಳಿಗೆ ಹೊಡೆದಿರುತ್ತಾರೆ. ಆಗ ನಾನು ಚಾಸಾ3 ಮತ್ತು 4 ರವರು ಚಾಸಾ2 ರವರನ್ನು ಬಿಡಿಸಿದೆವು. ಆಗ ಆರೋಪಿಗಳು ಈ ದಿನ ನೀವು ಉಳಿದುಕೊಂಡಿದ್ದೀರಾ ಮುಂದೆ ನಿಮ್ಮನ್ನು ಸಾಯಿಸುತ್ತೇವೆ ಎಂದು ಬೆದರಿಕೆ ಹಾಕಿದ್ದು, ನಂತರ ಚಾಸಾ2 ರವರನ್ನು ಚಾಮರಾಜನಗರದ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆ ಗಾಗಿ ಕರೆದುಕೊಂಡು ಬಂದು, ನಂತರ ಈ ಬಗ್ಗೆ ಊರಿನ ಹಿರಿಯರಿಗೆ ತಿಳಿಸಿದ್ದು ಈ ಬಗ್ಗೆ ಊರಿನ ಹಿರಿಯರು ಆರೋಪಿಗಳನ್ನು ಕೇಳಿದಾಗ ಆರೋಪಿಗಳು ನಿಮ್ಮಿಷ್ಟದಂತೆ ಮಾಡಿಕೊಳ್ಳಿ ಎಂದು ಹೇಳಿದ್ದರಿಂದ ನಂತರ ಮರುದಿನ ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಇದೇ ತಾನು ನೀಡಿದ ದೂರು ಎಂದು ಗುರುತಿಸಿದ್ದು, ತನ್ನ ಸಹಿಯನ್ನು ಗುರುತಿಸಿರುತ್ತಾರೆ. ದೂರನ್ನು ನಿಪಿಃ1 ಎಂದೂ, ಸಾಕ್ಷಿ ಸಹಿಯನ್ನು ನಿಪಿಃ1 (ಎ) ಎಂದು ಗುರುತಿಸಲಾಯಿತು.

ದಿನಾಂಕಃ 09.03.2017 ರಂದು ಪೊಲೀಸರು ಸ್ಥಳ ಕ್ಕೆ ಬಂದಿದ್ದು ನಾನೇ ಸ್ಥಳ ತೋರಿಸಿದ್ದು, ಪೊಲೀಸರು ನನ್ನ ಸಮಕ್ಷಮ ಸ್ಥಳ ಮಹಜರ್ ಮಾಡಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಸ್ಥಳ ಮಹಜರ್ ಮತ್ತು ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿಃ2 ಎಂದೂ, ಸಾಕ್ಷಿ

ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು. ಪೊಲೀಸರು ಮಹಜರ್ ಕಾಲಕ್ಕೆ ಆರೋಪಿಗಳು ಉಪಯೋಗಿಸಿದ ಮರದ ದೊಣ್ಣೆಯನ್ನು ವಶಪಡಿಸಿಕೊಂಡಿದ್ದು ಅದನ್ನು ನೋಡಿದರೆ ಗುರುತಿಸಿರುತ್ತೇನೆ. ಈಗ ನನಗೆ ತೋರಿಸಿದ ಮರದ ದೊಣ್ಣೆಯನ್ನು ಪೊಲೀಸರು ನನ್ನ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ. ಮರದ ದೊಣ್ಣೆಯನ್ನು ಮುಮಾ 1 ಎಂದು ಗುರುತಿಸಲಾಯಿತು. ಆರೋಪಿಗಳು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳು ಗೈರಾಗಿದ್ದು ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲಾ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ಪಾಟೀಸವಾಲುಃ ಈ ಹಂತದಲ್ಲಿ ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಪಾಟೀಸವಾಲಿಗೆ ಸಮಯ ನೀಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.